ಶ್ರೀ ಬಿ. ಎಲ್. ಗೌಡ.—ಈಗತಾನೇ ಒಂದು ಕಾಪಿ ಬಂದಿದೆ. ಮಾನ್ಯ ಸ್ನೇಹಿತರಿಗೆ ಬೇಕಾದರೆ ಕೊಡುತ್ತೇನೆ.

Mr. SPEAKER.—The Hon. Minister may place it on the Table of the House.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಕೋರಾರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ತುರ್ತು ಯೋಜನೆಯನ್ನು ಮಾಡತಕ್ಕ ಕಾಲದಲ್ಲಿ, ಇಡೀ ರಾಜ್ಯದಲ್ಲಿ ಕ್ಷಾಮಕ್ಕೆ ಅನೇಕ ಜಿಲ್ಲೆಗಳು ತುತ್ತಾಗುತ್ತಿವೆ, ಆದರಲ್ಲಿ ಹಾಸನ ಜಿಲ್ಲೆಯೂ ಒಂದು. ಆದ್ದರಿಂದ ಕ್ಷಾಮದ ದವಡೆಗೆ ಸಿಕ್ಕುವಂಥ ಪ್ರದೇಶಗಳಿಗೆಲ್ಲಾ ಶಾಶ್ವತ ಪರಿಹಾರವನ್ನು ದೊರಕಿಸಿಕೊಡುವಂಥ ಒಂದು ಯೋಜನೆಯನ್ನು ಸರ್ಕಾರ ವೇನಾದರೂ ಇಟ್ಟುಕೊಂಡಿದೆಯೇ ?

ಶ್ರೀ ಬಿ. ಎಲ್. ಗೌಡ.—ಅಂಥ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಪ್ರಾಯೋಗಿಕವಾಗಿ ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ತೆಗೆದು ಕೊಂಡಿದ್ದೇವೆ.

Employment of Scheduled Castes and Scheduled Tribes people in Janata Bazaar, Bijapur

18. Sri S. S. ARAKERI (Balloli).—

Will the Minister for Development be pleased to state :—

(*a*) the total number of persons employed in Janata Bazaar, Bijapur ;

(*b*) of them, the number of clerks and sales girls ; and the number belonging to Scheduled Castes and Scheduled Tribes ;

(*c*) whether it has come to the notice of Government that the number of employees of Scheduled Castes and Scheduled Tribes is not 18 per cent of the total number of employees in the Janata Bazaar ;

(*d*) if so, the steps that Government propose to take to adhere to the reservation of 18 per cent of Scheduled Castes and Scheduled Tribes there ?

Sri P. M. NADGOUDA (Minister for Development).—

(*a*) 28.

(*b*) 6 clerks and 9 sales girls. None of them belongs to Scheduled Castes and Scheduled Tribes.

(*c*) Yes.

(*d*) Necessary steps are being taken for the reservation in favour of persons belonging to Scheduled Castes and Scheduled Tribes for appointments in the Janata Bazaar, Bijapur.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರದ ಜನತಾ ಬಜಾರಿನಲ್ಲಿ ಕೆಲಸ ಮಾಡುತ್ತಿರುವ 28 ಮಂದಿಯಲ್ಲಿ ಅನುಸೂಚಿತ ಜಾತಿಯವರು ಮತ್ತು ಅನುಸೂಚಿತ ಆದಿಮ ಜಾತಿಗಳವರು ಒಬ್ಬರೂ ಇಲ್ಲದಿರುವುದಕ್ಕೆ ತಮ್ಮ ಉದಾಸೀನವೇ ಕಾರಣವಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇದುವರೆಗೆ ನಿರ್ಬಂಧ ಮಾಡಲು ಅವಕಾಶವಿರಲಿಲ್ಲ. ಅವು ಸೆಲ್ಫ್ ಡಿಟರ್ಮಿನಿಂಗ್ ಬಾಡೀಸ್. ಈಗ ಸರಕಾರ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಮಾಡಿ ನಿರ್ಬಂಧಮಾಡಲು ಅವಕಾಶಮಾಡುತ್ತಿದೆ.

ಶ್ರೀ ಎಸ್. ಎಸ್. ಅರಕೇರಿ.—ಇಂಥ ಅಟಾನಮಸ್ ಬಾಡೀಸ್‌ನಲ್ಲಿ ಇದುವರೆಗೆ ಶೇಕಡ 18 ಸ್ಥಾನಗಳನ್ನು ಮೀಸಲಾಗಿಡಲು ಅವಕಾಶವಾಗಿರಲಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ—ಮಾನ್ಯ ಸದಸ್ಯರು ಹೇಳಿದಂತೆ ರಾಕ್ಯೂನ ಇದ್ದುದರಿಂದ ಈಗ ತಿದ್ದುಪಡಿ ಕಾಯಿದೆ ಮಾಡಲಾಗಿದೆ. ಅದು ಪಾಸಾದ ನಂತರ ಮುಂದೆ ನ್ಯೂನತೆಗೆ ಅವಕಾಶ ಬರುವುದಿಲ್ಲ.

Sri J. P. SARWESH.—In reply to (*d*), it has been stated that necessary steps are being taken for the reservation in favour of persons belonging to Scheduled Castes and Tribes for appointments in the Janata Bazaar, Bijapur. Will the Government assure that it will take the same steps in other Janata Bazaars also ?

Sri P. M. NADGOUDA.—Yes.

Sri H. SIDDAVEERAPPA.—The Hon. Minister was pleased to say that these are self-determining bodies. May I know what he means thereby ? Does it mean that they have their own capital or they won't draw any funds from the State Exchequer ? What is it that he exactly means by that term ?

ಶ್ರೀ ಪಿ. ಎಂ. ನಾಡಗೌಡ.—ಅವರು ಬೈಲಾ ಮತ್ತು ರೂಲ್ಸ್ ಮಾಡಿಕೊಂಡು ಅದರಂತೆ ನಡೆಯುತ್ತಿದ್ದರು. ಸರಕಾರ ಏನಾದರೂ ಹಾಗೆ ಮಾಡುವಾಗ ಮಧ್ಯೆ ಪ್ರವೇಶ ಮಾಡಿದರೆ ಡೇ ಟು ಡೇ ಅಡ್ಮಿನಿಸ್ಟ್ರೇಷನ್ನಿನಲ್ಲೇಕೆ ಕೈಹಾಕುವುದು ಎಂದು ಪ್ರಶ್ನೆ ಮಾಡುವರು. ಮುಂದೆ ತೊಂದರೆಯಾಗದ ಹಾಗೆ ಸರಕಾರದವರು ತಿದ್ದುಪಡಿ ಕಾಯಿದೆ ತರುತ್ತಿದ್ದಾರೆ. ಅದು ಪಾಸ್ ಆದಾಗ ತಕ್ಕ ಅಧಿಕಾರ ಬರುವುದು.

ಶ್ರೀ ಜಯಪ್ರಕಾಶ ನಾರಾಯಣ್.—ರಾಜ್ಯಾಂಗದ ಪ್ರಕಾರ ಸರಕಾರ ಸಾಕಷ್ಟು ಪರ್ಸೆಂಟೇಜ್ ಕೊಡದೆ ಏಕೆ ತನ್ನ ಕರ್ತವ್ಯದಲ್ಲಿ ಲೋಪಮಾಡಿದೆ ?

ಶ್ರೀ ಪಿ. ಎಂ. ನಾಡಗೌಡ.—ಇದಕ್ಕೆ ತಕ್ಕ ಕಾಯಿದೆ ಇರಲಿಲ್ಲ; ಈಗ ನೂಕ್ತ ಕ್ರಮ ತೆಗೆದು ಕೊಳ್ಳುತ್ತಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.—28 ಜನರನ್ನು ನೇಮಕ ಮಾಡುವಾಗ ಪೆಡ್ಯೂರ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರೆಷ್ಟು ಮಂದಿ ಅರ್ಜಿ ಹಾಕಿದ್ದರು ?

ಶ್ರೀ ಪಿ. ಎಂ. ನಾಡಗೌಡ.—ಆ ಮಾಹಿತಿ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಜನತಾ ಬಜಾರು ಕೋಆಪರೇಟೀವ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿರುವುದು. ಸರಕಾರ ಅದಕ್ಕೆ ಬಂಡವಾಳ ಕೊಡುವುದು; ಹಾಗಿರುವಾಗ ಸರಕಾರಿ ಆಜ್ಞೆ ಪ್ರಕಾರ ಏಕೆ ನೇಮಕ ಮಾಡಬಾರದು ?

ಶ್ರೀ ಪಿ. ಎಂ. ನಾಡಗೌಡ.—ಅದು ಲಗತ್ತಾಗುವಂತೆ ಮಾಡಲು ಈಗ ತಿದ್ದುಪಡಿ ಮಾಡ ಲಾಗುತ್ತಿದೆ.

ಶ್ರೀ ಎಂ. ನಾಗಪ್ಪ.—ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್‌ನಿಂದ ಲಿಸ್ಟ್ ತರಿಸಿ ನೇಮಕ ಮಾಡಲಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ. ಅವರೇ ಅಪ್ಲಿಕೇಷನ್ ಕರೆದಿದ್ದರು.

ಶ್ರೀ ಎಸ್. ಎಂ. ಗುರಡ್ಡಿ.—ಸಹಕಾರ ಸಂಸ್ಥೆಗಳಿಗೆ ಇಷ್ಟು ಪರ್ಸೆಂಟ್ ನಿಮ್ನವರ್ಗದವರನ್ನು ತೆಗೆದುಕೊಳ್ಳಿ ಎಂದು ಬೈಲಾ ಪಾಸು ಮಾಡುವಾಗ ತಿಳಿಸಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ.

Sri D. DEVARAJ URS.—Just now the Hon. Minister stated that the Government is going to direct the Registrar. But in another reply he says that Government has no power to do it. What does he exactly mean ?

ಶ್ರೀ ಪಿ. ಎಂ. ನಾಡಗೌಡ.—ಸರಕಾರಕ್ಕೆ ಅಧಿಕಾರವಿಲ್ಲ, ಆದು ಪಡೆದುಕೊಳ್ಳುತ್ತಿದೆ ಎಂಬುದು ಅವರ ಅರ್ಥ.

ಶ್ರೀ ಡಿ. ದೇವರಾಜ ಅರಸ್.—ಯಾವ ರೀತಿ ಅಧಿಕಾರ ಪಡೆಯುವುದು ?

ಶ್ರೀ ಪಿ. ಎಂ. ನಾಡಗೌಡ.—ಬೈಲಾ ತಿದ್ದುಪಡಿ ಆಗಬೇಕಾಗುತ್ತದೆ. ಮುಂದೆ ಸರಕಾರ ಅಡ್ಜೆಸ್ಟ್ ಮಾಡಿ ಲಕ್ಯೂನ ಸರಿಪಡಿಸುವುದು.

ಶ್ರೀ ಡಿ. ದೇವರಾಜ ಅರಸ್.—ಬೈಲಾ ಒಪ್ಪುವವರು ಯಾರು ? ರಿಜಿಸ್ಟ್ರಾರರು ಅಲ್ಲವೇ ? Let him clarify. Let him not escape by saying that it is not the responsibility of the Government. Bye-laws will come into operation if the Registrar accepts them according to my understanding under the Co-operative Societies Act and Rules. ರಿಜಿಸ್ಟ್ರಾರ್ ಆಗಿರುವ ಬಾಡಿ ಏಕೆ ಜಾರಿಗೆ ತರಬಾರದು ?

ಶ್ರೀ ಪಿ. ಎಂ. ನಾಡಗೌಡ.—ಮೊದಲು ಬೈಲಾ ಸಮಿತಿ ಮಾಡುವುದು, ಸರಕಾರದವರು ಅಡ್ಜೆಸ್ಟ್ ಮಾಡುವರು, ಇನ್ನು ಮುಂದೆ ಸಂಬಂಧಪಟ್ಟ ಕಾಯಿದೆ ತಿದ್ದುಪಡಿ ಮಾಡಿ ಒತ್ತಾಯ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ಹಿಂದುಳಿದ ಪಂಗಡದವರನ್ನು ಇಂತಿಷ್ಟು ನೇಮಕ ಮಾಡಿಕೊಳ್ಳಲೇಬೇಕು ಎಂದು ಹೇಳಲು ಒಂದು ಅತ್ಯುನ್ನತ ಮಟ್ಟದ ಸಮಿತಿ ಇದೆ. ಆ ಸಮಿತಿಯವರು ಯಾವ ಯಾವ ಸಂಸ್ಥೆಯಲ್ಲಿ ಎಷ್ಟು ಮಂದಿಯನ್ನು ನೇಮಕ ಮಾಡಿಕೊಂಡಿದ್ದಾರೆಂಬುದನ್ನು ನೋಡುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇದು ಸಮಿತಿಯ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದು ಅನುಮಾನವಾಗಿದೆ. ಈಗ ಜನತಾ ಬಜಾರು ಮಾತ್ರವಲ್ಲದೆ, ಸೊಸೈಟಿಗಳು, ಕೋಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳು ಮುಂತಾದ ಸಂಸ್ಥೆಗಳಲ್ಲೆಲ್ಲಾ ಸಿಪ್ಪು ವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಲು ಕಲಸಕ್ಕೆ ಅವರನ್ನು ತೆಗಿದುಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ನಾವು ಅಮೆಂಡ್‌ಮೆಂಟ್ ಆಫ್ ದಿ ಕೋ ಆಪರೇಟೀವ್ ಸೊಸೈಟೀಸ್ ಆಕ್ಟನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಅಮೆಂಡ್‌ಮೆಂಟ್ ಆದ ಮೇಲೆ ಈ ಸಹಕಾರ ಸಂಘಗಳಲ್ಲಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

Sri M. N. RAMANNA.—Is it not a fact that under the present Act the Registrar is competent only to approve the strength and the scale of pay of the staff and that he has no right to direct as to wno should be appointed ?

Sri P. M. NADGOUDA.—Yes.

ಶ್ರೀ ಪಿ. ವೆಂಕಟಗಿರಿಯಪ್ಪ.—ಅನುಸೂಚಿತ ಜಾತಿಯವರು ಸಾಕಾದಷ್ಟು ಜನರನ್ನು ತೆಗೆದುಕೊಂಡಿಲ್ಲ, ಅನ್ಯಾಯವಾಗಿದೆ, ಎಷ್ಟು ಜನ ಅರ್ಜಿ ಹಾಕಿಕೊಂಡಿದ್ದಾರೆ ಎಂದು ಮಾನ್ಯ ಅರಕೇರಿಯವರು ಪ್ರಶ್ನೆ ಕೇಳಿದರೆ ಅದಕ್ಕೆ ನೋಟೀಸ್ ಬೇಕು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ ಈ ಪ್ರಶ್ನೆಯನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಬೇರೆ ಪ್ರಶ್ನೆಗಳನ್ನು ಕೇಳಿ ಏನು ಪ್ರಯೋಜನ ? ಎಷ್ಟು ಜನ ಅರ್ಜಿ ಹಾಕಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಉತ್ತರ ಕೊಡುವವರೆಗೂ ಈ ಪ್ರಶ್ನೆಯನ್ನು ದಯವಿಟ್ಟು ತಡೆಹಿಡಿಯಬೇಕು.

(ಉತ್ತರವಿಲ್ಲ.)

ಶ್ರೀ ಎಸ್. ಎಸ್. ಅರಕೇರಿ.—ಈ ಸಹಕಾರಿ ಹಿಂಧೋಳನ ಯಾವಾಗಲೂ ಬಡವರ ಸಲುವಾಗಿ ಹಿಂದುಳಿದವರ ಸಲುವಾಗಿ ಇದ್ದದ್ದು. ತಾವು ಸಹಕಾರಿ ಮಂತ್ರಿಗಳಾಗಿದ್ದು. ಅದರಲ್ಲೂ ವಿಜಾಪುರದ ಜಿಲ್ಲೆಯವರಾಗಿ ಈ ರೀತಿ ಆಗುತ್ತಾ ಇರುವುದಕ್ಕೆ ಅವಕಾಶ ಕೊಟ್ಟಿರುವುದು ನಾಚಿಕೆಗೇಡಲ್ಲವೇ ಸ್ವಾಮಿ ? ತಾವು ರಾಜೀನಾಮೆ ಕೊಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರೂ ಕೂಡ ಅಲ್ಲಿ ಇದ್ದಾರೆ. ಅವರೂ ಕೂಡ ಇದರ ಸಲುವಾಗಿ ಪ್ರಯತ್ನ ಮಾಡಿದರೆ ಒಳ್ಳೆಯದು.